**ಒ.ಎಸ್.ನಂ. 163/2013**
**ಡಿ. ಡಬ್ಲೂ-1**

**ದಿನಾಂಕಃ 10.06.2026 ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು :- ವಾದಿ ಪರ ಶ್ರೀ ಕೆ ಜಿ ವಕೀಲರಿಂದಃ-**

ನಾನು ಎಂ ಬಿ ಎ ಪದವೀಧರ. ನನ್ನ ಪ್ರಮಾಣ ಪತ್ರದಲ್ಲಿರುವ ವಿಚಾರಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ತಕರಾರು ಸಲ್ಲಿಸಲು ನಾನೇ ಮಾಹಿತಿ ಕೊಟ್ಟಿರುತ್ತೇನೆ. ವಾದಿ ಏನು ಪರಿಹಾರ ಕೋರಿ ದಾವೆ ಸಲ್ಲಿಸಿದ್ದಾರೆ ಎಂದು ಜಮೀನು ಅದಲು ಬದಲು ಆಗಿದೆ ಎಂದು ಸಲ್ಲಿಸಿದ್ದಾರೆಂದು ನುಡಿಯುತ್ತಾರೆ. ವಾದಿ ಏನೇನು ದಾಖಲೆ ಹಾಜರುಪಡಿಸಿದ್ದಾರೆಂದು ಗೊತ್ತಿಲ್ಲ. ವಾದಿಗೆ ಸರ್ವೆ ನಂ. 150/25 ರಲ್ಲಿ ಒಂದು ಎಕರೆ ಮಂಜೂರು ಮಾಡಿರುತ್ತಾರೆ ಎಂದರೆ ಸರಿ. ಒಂದು ಎಕರೆ ಚೆಕ್ಕು ಬಂದಿ ಪೂರ್ವಕ್ಕೆ ನಿಂಗರಾಜುರವರ ಜಮೀನು, ಪಶ್ಚಿಮಕ್ಕೆ ಶಿವಣ್ಣರವರ ಜಮೀನು, ಉತ್ತರಕ್ಕೆ ಪುಟ್ಟನಿಂಗವಮ್ಮರವರ ಜಮೀನು, ದಕ್ಷಿಣಕ್ಕೆ ಚಂದ್ರಶೇಖರ ರವರ ಜಮೀನು ಎಂದರೆ ಸರಿ. ಸದರಿ ಜಮೀನಿನಲ್ಲಿ ವಾದಿ ವ್ಯವಸಾಯ ಮಾಡಿಕೊಂಡು ಸ್ವಾಧೀನ ಇದ್ದಾರೆ ಎಂದರೆ ಸರಿ. ಸದರಿ ಸರ್ವೆ ನಂಬರ ನಲ್ಲಿ ನನ್ನ ತಂದೆ 2 ಎಕರೆ 15 ಗುಂಟೆ ಜಮೀನನ್ನು ವಾದಿಯ ಗಂಡ ಮತ್ತು ಅವರ ಅತ್ತೆಯಿಂದ ಖರೀದಿ ಮಾಡಿರುತ್ತಾರೆ. ನಾವು ಖರೀದಿ ಮಾಡಿರುವ 2 ಎಕರೆ 15 ಗುಂಟೆ ಜಮೀನನ್ನು ಹೊರತುಪಡಿಸಿ ಉಳಿದ 1 ಎಕರೆ 25 ಗುಂಟೆ ಮತ್ತು ದಾವ ಸ್ವತ್ತಿಗೂ ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ನನ್ನ ತಂದೆ ಪ್ರಭಾವಿಯಾಗಿದ್ದು, ರಾಜಕೀಯ ವ್ಯಕ್ತಿಯಾಗಿರುತ್ತಾರೆ ಎಂದರೆ ಸರಿಯಲ್ಲ. ವಾದಿಯ ವಿರುದ್ದ ಹಂಪಾಪುರ ಠಾಣೆಗೆ ದೂರು ಕೊಟ್ಟಿದ್ದವು ಎಂದರೆ ಸರಿ. ವಾದಿಯನ್ನು ಹೆದರಿಸಿ ನಿ.ಡಿ 3 ನ್ನು ಬರೆಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ವಾದಿಗೆ ತೊಂದರೆ ಕೊಡಲು ನಿ.ಡಿ 3 ನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ವಾದಿ ವ್ಯವಸಾಯಕ್ಕೆ ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ. ವಾದಿಯನ್ನು ದಾವಾ ಸ್ವತ್ತಿನಿಂದ ಹೊರಗೆ ಹಾಕಲು ದಾವಾ ಸ್ವತ್ತನ್ನು ಕಬಳಿಸಲು ಪ್ರಯತ್ನಿಸುತ್ತಿದ್ದೇವೆ ಎಂದರೆ ಸರಿಯಲ್ಲ. ವಾದಿಗೆ ಕ್ರಯದ ಬಾಬ್ತು

ಬಾಕಿ ಇದ್ದು, ಆ ಉದ್ದೇಶಕ್ಕಾಗಿ ನಿ.ಡಿ 3 ನ್ನು ಬರೆಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿ.ಡಿ 3 ಕ್ಕೂ ಈ ದಾವೆಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

**ಒಂದನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ..ದಂಡಾಧಿಕಾರಿಗಳು, ಹೆಚ್.ಡಿ. ಕೋಟೆ.**